
# ಅರ್ಥಾನ್ವೇಷಣೆ

**ಒಬ್ಬ ಯುವಕನು** ತುಂಬ ನಿರಾಸೆಯಿಂದಿದ್ದ. ಅವನು ಅನೇಕ ಕ್ಷೇತ್ರಗಳಲ್ಲಿ ಕೆಲಸಮಾಡಿ ಯಾವುದರಲ್ಲಿಯೂ ಸಫಲತೆಯನ್ನು ಕಂಡಿರಲಿಲ್ಲ. ಅವನಿಗೆ ಯಾರೂ ಸ್ನೇಹಿತರೂ ಇರಲಿಲ್ಲ. ಅವನ ಮನೆಯವರೂ, ಸಂಬಂಧಿಕರೂ ಅವನು ಕೈಲಾಗದವನೆಂದು ದೂರವಿರಿಸಿದ್ದರು. ಅವನು ಒಂಟಿತನದಿಂದ ದುಃಖಿಸುತ್ತಿದ್ದ. ಜೀವನಕ್ಕೆ ಯಾವ ಅರ್ಥವೂ ಇಲ್ಲ ಎಂದು ಭಾವಿಸತೊಡಗಿದ.



ಒಂದು ದಿನ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಮನೆಯಿಂದ ಹೊರಟನು. ಸಮುದ್ರತೀರದಲ್ಲಿ ಕುಳಿತು ಆಳವಾಗಿ ಚಿಂತಿಸುತ್ತಿದ್ದನು. ಜೀವನದ ಅಳಿವು ಉಳಿವಿನ ಹೋರಾಟದಲ್ಲಿ ಅವನ ಮನಸ್ಸು ಅತ್ಯಂತ ಅಶಾಂತ ಸ್ಥಿತಿಯಲ್ಲಿತ್ತು. ಸಮುದ್ರದಂತೆಯೇ ಅವನ ಮನಸ್ಸು ಅಲ್ಲೋಲ ಕಲ್ಲೋಲವಾಗಿತ್ತು—ಚಿಂತೆಯ ಅಲೆಗಳ ತೀಕಲಾಟ ನಡೆಯುತ್ತಿತ್ತು.

ಅವನು ಅಲೆಗಳನ್ನೇ ನೋಡುತ್ತ ಕುಳಿತಿದ್ದನು. ಆಗ ಅವನಿಗೆ ಒಂದು ದೃಶ್ಯ ಗಮನಕ್ಕೆ ಬಂತು. ಅಲೆಯ ಜೊತೆ ಒಂದು ದೊಡ್ಡ ಮೀನು ದಡಕ್ಕೆ ಬಂತು. ಅದು ಅಲೆಯೊಡನೆ ಹಿಂತಿರುಗಿ ಹೋಗಲಾಗದೆ ದಡದಲ್ಲಿಯೇ ಉಳಿದುಕೊಂಡುಬಿಟ್ಟಿತು. ಅದು ಸಾವಿನ ಸಂಕಟದಿಂದ ಪರದಾಡುತ್ತಿತ್ತು.

ಆ ಯುವಕನಿಗೆ ಅದರ ಮೇಲೆ ಕರುಣೆ ಬಂತು. ಅವನು ಅದನ್ನು ಮೆಲ್ಲಗೆ ಎತ್ತಿಕೊಂಡುಹೋಗಿ ನೀರಿಗೆ ಬಿಟ್ಟನು. ಈ ರೀತಿ ಅವನು ಎರಡು ಮೂರು ಮೀನುಗಳನ್ನು ರಕ್ಷಿಸಿದ.

ಆಗ ಅವನಿಗೆ ಹೊಳೆಯಿತು. ತನ್ನ ಜೀವನಕ್ಕೆ ಅರ್ಥವಿದೆ ಎಂದು. ನಾನು ಇತರರಿಗಾಗಿ ಬಾಳುತ್ತೇನೆ, ಆಗ ನನ್ನ ಜೀವನ ಸಾರ್ಥಕವಾಗುತ್ತದೆ; ಅದರ ಮೂಲಕ ಶಾಂತಿ ಲಭಿಸುತ್ತದೆ—ಎಂದು ಮನಸ್ಸಿನಲ್ಲಿಯೇ ಚಿಂತಿಸಿದನು.

ಈಗ ಆತ್ಮಹತ್ಯೆಯ ಆಲೋಚನೆಯನ್ನು ಕೈಬಿಟ್ಟು ಮನೆಗೆ ಹಿಂತಿರುಗಿದನು.